ದುಬೆಯವರು ತೀರಿಕೊಂಡ ನಂತರ ಸಮಾಜವಾದಿ ಪಕ್ಷ ಈ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಬೇಕು ಎಂದು ನನಗನ್ನಿಸಿತು; ಅನಂತರ ನಾನು ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳ ಕಾರ್ಯಕರ್ತರೊಂದಿಗೂ ವ್ಯವಧಾನದಿಂದ ಮಾತಾಡುತ್ತಿದ್ದೇನೆ.

ನಿಮ್ಮ ಉತ್ತರದ ಶೀಘ್ರ ನಿರೀಕ್ಷೆಯಲ್ಲಿ,

ನಿಮ್ಮ ವಿಶ್ವಾಸಿ

ಅರ್ಜುನ್ ಸಿಂಹ ಬದೌರಿಯಾ

ಪಕ್ಷದ ಅಧ್ಯಕ್ಷರಾದ ರಾಜ್‌ನಾರಾಯಣರಿಗೆ ಹೈದರಾಬಾದಿನ ಸೋಷಲಿಸ್ಟ್ ಪಕ್ಷದ ಕಚೇರಿಯ ವಿಳಾಸಕ್ಕೆ ಈ ಪತ್ರ ಬರೆದ ಬದೌರಿಯಾ ಸ್ವಾತಂತ್ರ್ಯ ಚಳುವಳಿಯ ಕಾಲದ ಭೂಗತ ಹೋರಾಟದಲ್ಲಿ ಭಾಗಿಯಾಗಿದ್ದವರು. ಲೋಹಿಯಾ ಹಾಗೂ ಬದೌರಿಯಾ ಇಬ್ಬರೂ 1910ರಲ್ಲಿ ಹುಟ್ಟಿದವರು. ಬದೌರಿಯಾರ ಸಂಘಟನಾ ಶಕ್ತಿ ಕಂಡ ಲೋಹಿಯಾ, ಜೆ.ಪಿ. ಅವರನ್ನು 'ಕಮ್ಯಾಂಡರ್ ಸಾಹಬ್' ಎನ್ನುತ್ತಿದ್ದರು; ಮುಂದೆ ಬದೌರಿಯಾ 'ಕಮ್ಯಾಂಡರ್' ಎಂದೇ ಖ್ಯಾತರಾದರು.

ಉತ್ತರ ಪ್ರದೇಶದ ಚಂಬಲ್ ಕಣಿವೆಯ ರೈತ ಹೋರಾಟ ಕಟ್ಟಿದ್ದ ಬದೌರಿಯಾ, ನಂತರ ಈ ಸಂಘಟನೆಯನ್ನು ಸೋಷಲಿಸ್ಟ್ ಪಕ್ಷದಲ್ಲಿ ವಿಲೀನಗೊಳಿಸಿದರು. 1957ರಿಂದ ಇಟಾವಾ ಕ್ಷೇತ್ರದ ಲೋಕಸಭಾ ಸದಸ್ಯರಾಗಿದ್ದ ಅವರು 1962ರಲ್ಲಿ ಚುನಾವಣೆ ಸೋತಿದ್ದರು. ಬದೌರಿಯಾ ಫರೂಖಾಬಾದ್‌ನಲ್ಲೂ ಪ್ರಭಾವಶಾಲಿಯಾಗಿದ್ದರು; ಆದರೂ ಅಲ್ಲಿನ ಉಪಚುನಾವಣೆಯಲ್ಲಿ ಲೋಹಿಯಾರೇ ನಿಲ್ಲಬೇಕೆಂದು ಓಡಾಡುತ್ತಿದ್ದ ಬದೌರಿಯಾ ಆ ಕಾಲದ ರಾಜಕಾರಣದ ಅಂತಃಕರಣ, ಬದ್ಧತೆ, ಕರ್ತವ್ಯಪ್ರಜ್ಞೆಗಳ ಸುಂದರ ಸಂಗಮದಂತಿದ್ದರು.

ಫೆಬ್ರುವರಿ 7, 1963ರಂದು ಬದೌರಿಯಾ ಬರೆದ ಪತ್ರ ಪಕ್ಷದ ಅಧ್ಯಕ್ಷರಿಗೆ ತಲುಪಿ, ಅದಕ್ಕೆ ಅವರು ಮಾರೋಲೆ ಬರೆದ ದಿನಾಂಕ 23 ಫೆಬ್ರುವರಿ 1963! ಚುನಾವಣಾ ಸ್ಪರ್ಧೆಯಂಥ ಮಹತ್ವದ ವಿಷಯವನ್ನು ಕೂಡ ತಕ್ಷಣ ಟೆಲಿಫೋನ್ ಮಾಡಿ ತಿಳಿಸಲಾಗದಷ್ಟು ಬಡತನದಲ್ಲಿ ಸಮಾಜವಾದಿ ಪಕ್ಷ ಇತ್ತು. ಬದೌರಿಯಾ ಪತ್ರಕ್ಕೆ ರಾಜ್‌ನಾರಾಯಣ್ ಉತ್ತರ ಬರೆದಾಗ, ಪಕ್ಷದ 'ಸಂಭವನೀಯ ಅಭ್ಯರ್ಥಿ' ಲೋಹಿಯಾಗೆ ಇನ್ನೂ ವಿಷಯ ತಲುಪಿಯೇ ಇರಲಿಲ್ಲ!

ಪ್ರಿಯ ಬದೌರಿಯಾಜೀ,

ನಿಮ್ಮ ಪತ್ರ ತಲುಪಿತು. ನಿಮ್ಮ ಪತ್ರ ಓದುತ್ತಿದ್ದಂತೆ ಇಲ್ಲಿ ಕೂತಿದ್ದ ಎಲ್ಲರೂ ಆನಂದದಿಂದ ಕುಣಿದಾಡಿದರು.

ನೀವು ಕೂಡಲೆ ಫರೂಖಾಬಾದಿಗೆ ಹೋಗಿ ಸ್ಥಳೀಯ ಸಮಿತಿಯೊಂದಿಗೆ ಮಾತಾಡಿ ಮೀಟಿಂಗ್ ದಿನಾಂಕ ನಿಗದಿ ಮಾಡಿ. ಪಕ್ಷದ ಕಾರ್ಯಾಲಯಕ್ಕೆ ಬಂದು ಎಲ್ಲ ಸಂಗಾತಿಗಳಿಗೂ ಪತ್ರ ಬರೆದು ಫರೂಖಾಬಾದ್ ಮೀಟಿಂಗಿಗೆ ಬರಲು ಕೋರಿಕೊಳ್ಳಿ.

ನಾನು ಶೀಘ್ರದಲ್ಲೇ ಡಾ. ಸಾಹಬ್ ಅವರನ್ನು ಭೇಟಿ ಮಾಡಿ ನಿಮ್ಮ ಪತ್ರದ ಬಗ್ಗೆ ಚರ್ಚಿಸುವೆ ಹಾಗೂ ಡಾ. ಸಾಹಬ್ ಅವರನ್ನು ಮೀಟಿಂಗಿಗೆ ಕರೆ ತರುವೆ.'

ಈ ಪತ್ರ ಬಂದ ಮೇಲೆ ಬದೌರಿಯಾ ಚುನಾವಣಾ ಸಿದ್ಧತೆಗೆ ಇಳಿದೇ ಬಿಟ್ಟರು. ಆ ಸಿದ್ಧತೆ ಕುರಿತ ವರದಿಯೊಂದರ ತುಣುಕುಗಳು:

'ಮೊದಲಿಗೆ, ಬದೌರಿಯಾ ಫರೂಖಾಬಾದ್‌ನಲ್ಲಿದ್ದ ಪ್ರಜಾಸೋಷಲಿಸ್ಟ್ ಪಕ್ಷದ ಭರತ್‌ಸಿಂಗ್ ರಾಥೋರ್ ಜೊತೆ ಉಪಚುನಾವಣೆಯ ಬಗ್ಗೆ ಮಾತಾಡಿದರು. ಇವರಿಬ್ಬರೂ ಹತ್ತಿರದ ಸ್ನೇಹಿತರಾಗಿದ್ದರು. ರಾಥೋರ್ 1962ರ ಚುನಾವಣೆಯಲ್ಲಿ ದುಬೆಯವರ ವಿರುದ್ಧ ಸೋತಿದ್ದರು. ರಾಥೋರ್ ತಾವು ಉಪಚುನಾವಣೆಯ ಅಭ್ಯರ್ಥಿಯಾಗುವುದನ್ನು ಸ್ಪಷ್ಟವಾಗಿ ನಿರಾಕರಿಸಿದರು. ಅವರು ಅಷ್ಟೊತ್ತಿಗಾಗಲೇ ಆಚಾರ್ಯ ಕೃಪಲಾನಿ ಫರೂಖಾಬಾದ್ ಕ್ಷೇತ್ರದ ಅಭ್ಯರ್ಥಿಯಾಗಬೇಕೆಂದು ಸಂದೇಶ ಕಳಿಸಿದ್ದರು. ಕೃಪಲಾನಿ ಮುರಾದಾಬಾದ್ ಲೋಕಸಭಾ ಉಪಚುನಾವಣೆಯಲ್ಲಿ ಸ್ಪರ್ಧಿಸುವ ನಿಟ್ಟಿನಲ್ಲಿ ಕೆಲಸ ಶುರು ಮಾಡಿದ್ದರು.

ನಂತರ ಫರೂಖಾಬಾದ್‌ನಲ್ಲಿ ನಡೆದ ಸಮಾಜವಾದಿ ಪಕ್ಷದ ಸರ್ವಸದಸ್ಯರ ಸಭೆಯಲ್ಲಿ ಹಲವು ನಾಯಕರು ಮಾತಾಡಿದರು. ಪಕ್ಷದ ಅಧ್ಯಕ್ಷ ರಾಜ್‌ನಾರಾಯಣ್ ಸಭೆಯ ಕೊನೆಗೆ 'ಡಾ. ಲೋಹಿಯಾ ಚುನಾವಣಾ ಅಭ್ಯರ್ಥಿಯಾಗಬೇಕು ಎನ್ನುವವರು ಕೈ ಎತ್ತಿ' ಎಂದರು. ಸಭೆಯಲ್ಲಿದ್ದ ಎಲ್ಲರೂ ಡಾ. ಲೋಹಿಯಾ ಫರೂಖಾಬಾದ್‌ನಿಂದಲೇ ಚುನಾವಣೆಗೆ ನಿಲ್ಲಬೇಕು ಎಂದು ಆಗ್ರಹಿಸಿದರು.

ಈ ಚುನಾವಣಾಪೂರ್ವ ಸಭೆ ನಡೆದ ದಿನಾಂಕ 6 ಮಾರ್ಚ್ 1963.

***

ಅತ್ತ 6 ಮಾರ್ಚ್ 1963ರಂದು 'ಸಂಭವನೀಯ' ಅಭ್ಯರ್ಥಿ ಲೋಹಿಯಾ ಬೆಂಗಳೂರಿನತ್ತ ಪಯಣ ಬೆಳೆಸಿದ್ದರು. ಮೇಲೆ ಹೇಳಿದ ಕ್ಷಿಪ್ರ ಬೆಳವಣಿಗೆಗಳ ಸೂಚನೆ ಅವರಿಗೆ ಇದ್ದಂತಿರಲಿಲ್ಲ! ಬೆಂಗಳೂರಿನ ಹಾದಿಯಲ್ಲಿ ಅದೇ ದಿನ ರಮಾಗೆ ಬರೆದ ಪತ್ರದಲ್ಲಿ ಲೋಹಿಯಾ ವಿಚಿತ್ರ ತಳಮಳದಲ್ಲಿದ್ದ ಸೂಚನೆಗಳಿವೆ:

ಪ್ರಿಯ ರಮಾ,

ಈ ಸಲ ಯಾಕೋ ಆರೋಗ್ಯ ಅಷ್ಟು ಚೆನ್ನಾಗಿಲ್ಲ. ಮನಸ್ಸು ಹೆಚ್ಚು ಕೆಟ್ಟಂತಿದೆ. ಎಲ್ಲ ಸಂಗಾತಿಗಳಿಗೂ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕೆನ್ನಿಸುತ್ತದೆ: ಪ್ರತಿಯೊಂದು ವಿದಾಯವೂ ಕೊನೆಯದೆಂದು ತಿಳಿದು ಹೊರಡಬೇಕು. ಯಾರಿಗೆ ಗೊತ್ತು. ಪ್ರತಿ ಭೇಟಿಯನ್ನೂ ಹೊಸದು ಎಂದು ತಿಳಿದು ಭೇಟಿಯಾಗಬೇಕು. ಆಗಲೇ ಹೆಚ್ಚಿನ ಆನಂದ ದೊರೆಯುವುದು.

ನಿನಗೆ ಸರಿಯೆನ್ನಿಸಿದರೆ, ಮಧು ಲಿಮಯೆ ಬಗ್ಗೆ ನೀನು ಏನು ಬರೆದಿದ್ದೀಯೋ ಆ ಕುರಿತು ಅವನಿಗೇ ಒಂದು ಪತ್ರ ಬರೆ. ಮನುಷ್ಯ ತನ್ನ ಕರ್ತವ್ಯ ಮಾಡುತ್ತಾ ಹೋಗಬೇಕು; ಎಲ್ಲಿ ಆ ಕರ್ತವ್ಯಕ್ಕೆ ಬೆಲೆಯಿಲ್ಲವೋ ಅಲ್ಲಿ ಕೂಡ ಕರ್ತವ್ಯ ಮಾಡುತ್ತಾ ಹೋಗಬೇಕು.

...ಜ್ಞಾನೇಶ್ವರ ಮಿಶ್ರಾ, ರಜನಿಕಾಂತ್ ವರ್ಮಾ ಇವರೆಲ್ಲ ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬ ಬಗ್ಗೆ ಪತ್ರ ಬರೆಯಲು ಹೇಳು. ನಿನ್ನ ಕಣ್ಣು ನಾಕೂ ಕಡೆ ನೋಡುತ್ತಿರಬೇಕು.

ಹದಿನಾರನೆಯ ತಾರೀಕು ಹೈದರಾಬಾದಿಗೆ; ಹದಿನೆಂಟನೆಯ ತಾರೀಕು ವಿಮಾನದಲ್ಲಿ ದಿಲ್ಲಿಗೆ.

ನಿನ್ನ

ರಾಮ್ ಮನೋಹರ್

ಮೈಸೂರಿನಿಂದ ರಮಾಗೆ ಬರೆದ 12 ಮಾರ್ಚ್ 1963ರ ಪತ್ರದಲ್ಲಿ ಏನೋ ಬರೆಯಲು

